ಉಡುಪಿ ಜಿಲ್ಲೆಯಲ್ಲಿ ಹಂದಿ ಜ್ವರ ನಿಯಂತ್ರಣ:

770 (1481); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

(ಅ) ಉಡುಪಿ ಜಿಲ್ಲೆಯಲ್ಲಿ ಹಂದಿ ಜ್ವರ ರೋಗ ಕಾಣಿಸಿಕೊಂಡಿದೆಯೇ;

(ಆ) ಉಡುಪಿ ಜಿಲ್ಲೆಯಲ್ಲಿ ಹಂದಿಜ್ವರ ಪ್ರಕರಣಗಳು ಎಷ್ಟು ದಾಖಲಾಗಿವೆ;

(ಇ) ಹಂದಿಜ್ವರ ರೋಗ್ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಹೌದು.

(ಆ) ಉಡುಪಿ ಜಿಲ್ಲೆಯಲ್ಲಿ ಇಲ್ಲಿಯವರೆಗೆ 35 ಪ್ರಕರಣಗಳು

(ಇ) ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ :

ಇನ್‌ಫ್ಲೂಯೆಂಜಾ – ಎ (ಹೆಚ್1 ಎನ್1) ನಿಯಂತ್ರಣ ಕ್ರಮಗಳು:

1. ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಪ್ರತ್ಯೇಕ ವಾರ್ಡನ್ನು ಗುರುತಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಕೊಳ್ಳಲು, ಬೆಂಗಳೂರಿನ 87 ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಆಸ್ಪತ್ರೆಗಳಲ್ಲಿ ಶಂಕಿತ ರೋಗಿಗಳನ್ನು ಪ್ರತ್ಯೇಕಿಸಿ ಹೆಚ್1ಎನ್1 ಸೋಂಕಿತ ರೋಗಿಗಳಿಗೆ ಚಿಕಿತ್ಸೆ ನೀಡಲು ಏರ್ಪಾಡು ಮಾಡಲಾಗಿದೆ.

2. ಈ ಹಿಂದೆ ಎನ್.ಐ.ವಿ.ಪುಣೆಯಲ್ಲಿ ಪ್ರಯೋಗಾಲಯ ಪರೀಕ್ಷೆ ನಡೆಸುತ್ತಿದ್ದು ದಿನಾಂಕ: 08.08.2009 ರಿಂದ ಕೇಂದ್ರದ ಸೂಚನೆ ಯಂತೆ ಬೆಂಗಳೂರಿನ ನಿಮ್ಹಾನ್ಸ್ ಮತ್ತು ಉಡುಪಿಯ

ಮಣಿಪಾಲ್‌ನಲ್ಲಿ ಪರೀಕ್ಷಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈ ಪರೀಕ್ಷೆಗಳು ಮತ್ತು ಚಿಕಿತ್ಸೆಗಳನ್ನು ಉಚಿತವಾಗಿ ಮಾಡಲಾಗುತ್ತಿದೆ. ಬೆಂಗಳೂರು ಖಾಸಗಿ ಆಸ್ಪತ್ರೆ ನಾರಾಯಣ ನೇತ್ರಾಲಯ ಹಾಗೂ ರಕ್ಷಣಾ ಇಲಾಖೆಯ ಕಮಾಂಡೋ ಆಸ್ಪತ್ರೆಗಳಲ್ಲಿಯೂ ಸಹ ಹೆಚ್1ಎನ್1 ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

3. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕ್ಷಿಪ್ರ ಕಾರ್ಯಾಚರಣಾ ತಂಡ ಗಳನ್ನು ರಚಿಸಿ ಹೆಚ್1ಎನ್1 ರೋಗದ ನಿಯಂತ್ರಣದ ಬಗ್ಗೆ ತರಬೇತಿ ನೀಡಲಾಗಿದೆ.

4. ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಪ್ರತ್ಯೇಕ ವಾರ್ಡುಗಳನ್ನು ಗುರುತಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಕೊಳ್ಳಲು ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರುಗಳಿಲಗೆ ಸೂಚಿಸಲಾಗಿದೆ ಹಾಗೂ ಔಷಧಿ ಮತ್ತು ರಸಾಯನಿಕಗಳನ್ನು ವಿತರಿಸಲಾಗಿದೆ.

ಸಾರ್ವಜನಿಕರ ತಿಳುವಳಿಕೆಗಾಗಿ: ಏನು ಮಾಡಬೇಕು.

ಸೋಂಕು ಪೀಡಿತರ ಸಂಪರ್ಕದಿಂದ ದೂರವಿರುವುದು, ಶಂಕಿತ ರೋಗಿಯು ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು.

ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಳ್ಳುವುದು ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು.

ಕೆಮ್ಮುವಾಗ ಮತ್ತು ಸೀನುವಾಗ ಮಾಸ್ಕ್ / ಕೈವಸ್ತ್ರ ಉಪಯೋಗಿಸು ವುದು. ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯುವುದು.

ಪೌಷ್ಟಿಕ ಆಹಾರಗಳನ್ನು ಉಪಯೋಗಿಸುವುದು. ಚೆನ್ನಾಗಿ ನಿದ್ದೆ ಮಾಡು ವುದು, ಒತ್ತಡಗಳನ್ನು ನಿಭಾಯಿಸುವುದು.

ಏನು ಮಾಡಬಾರದು:

ಸೋಂಕಿತರ ಕೈ ಕುಲುಕುವುದು, ಚುಂಬಿಸುವುದು ಮತ್ತು ಆಲಿಂಗಿಸಿ ಕೊಳ್ಳುವುದನ್ನು ಮಾಡಬಾರದು.

ತಜ್ಞ ವೈದ್ಯರ ಸಲಹೆ ಇಲ್ಲದೆ ಔಷಧೋಪಚಾರ ಮಾಡಬಾರದು.

ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು.

ಆಸ್ಪಿರಿನ್ ಮಾತ್ರೆಗಳನ್ನು ಮಕ್ಕಳಿಗೆ ನೀಡಬಾರದು.

ತೆಗೆದುಕೊಂಡ ಕ್ರಮಗಳು:

ಮಳೆಗಾಲದಲ್ಲಿ ಹೆಚ್ಚಾಗಿ ಶ್ವಾಸಕೋಶದ ಸೋಂಕು ಕಾಣಿಸಿಕೊಂಡು ನೆಗಡಿ, ಕೆಮ್ಮು ಜ್ವರದ ಜೊತೆಗೆ ಉಸಿರಾಟದ ತೊಂದರೆಯಿಂದ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾದವರನ್ನು ಪರೀಕ್ಷಿಸಿದಾಗ ಹೆಚ್1ಎನ್1 ಸೋಂಕು ಕಂಡುಬಂದಲ್ಲಿ ಪ್ರತ್ಯೇಕ ವಿಭಾಗದಲ್ಲಿ ರೋಗಿಗಳನ್ನು ಪರೀಕ್ಷಿಸಿ, ಸರ್ಕಾರದ ಮಾರ್ಗಸೂಚಿಯಂತೆ ಶಂಕಿತ ರೋಗಿಗಳಿಗೆ ಚಿಕಿತ್ಸೆಗೊಳ ಪಡಿಸಲಾಗುತ್ತಿದೆ.

ಇಲ್ನೆಸ್ ಕ್ಲಾಸರ್ಸ್ ಬಗ್ಗೆ ಪ್ರಕ್ರಿಯೆ ಪರೀಕ್ಷೆ ನಡೆಸಿ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಶಂಕಿತ ರೋಗಿಗಳನ್ನು ಪ್ರತ್ಯೇಕಿಸಿ, ರೋಗ ನಿರ್ಧಾರ ಮಾಡಲು ಬೆಂಗಳೂರು ನಗರದಲ್ಲಿ ಖಾಸಗಿ 87 ಹಾಗೂ ಸರ್ಕಾರಿ 6 ಆಸ್ಪತ್ರೆಗಳು ಇರು ತ್ತವೆ. ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡುಗಳನ್ನು ತೆರೆಯ ಲಾಗಿದೆ.

ಟಾಮಿಫ್ಲೂ ಮಾತ್ರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಜಿಲ್ಲೆಯಲ್ಲಿ ದಾಸ್ತಾನು ಇಟ್ಟಿದ್ದು 'ಬಿ' ಮತ್ತು 'ಸಿ' ವರ್ಗದ ರೋಗಿಗಳಿಗೆ ಟಾಮಿಫ್ಲೂ ಮಾತ್ರೆ ಗಳನ್ನು ನೀಡುವ ವಿಪ್ರಾಡು ಮಾಡಲಾಗಿದೆ. 'ಎ' ವರ್ಗೀಕರಣ ದಲ್ಲಿರುವ ರೋಗಿಗಳನ್ನು ಅನುಸರಣೆ ಮಾಡಲಾಗುತ್ತಿದೆ.

ಹೆಚ್1ಎನ್ ರೋಗದ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸಲು, ಭಿತ್ತಿಪತ್ರ, ಕರಪತ್ರದ ಮೂಲಕ ಪ್ರಚಾರ ಮಾಡಲಾಗುತ್ತಿದೆ.

ಸಾಕಷ್ಟು ಪ್ರಮಾಣದ ಟಾಮಿಫ್ಲೂ ಮಾತ್ರೆ ಮತ್ತು ಸಿರಪ್‌ಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ದಾಸ್ತಾನು ಇಡಲಾಗಿದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಇವು ಲಭ್ಯವಿದ್ದು, ಯಾವುದೇ ಕೊರತೆಯಿರುವುದಿಲ್ಲ.

ರಾಜ್ಯದಲ್ಲಿನ ಖಾಸಗಿ ಔಷಧಿ ಅಂಗಡಿಗಳಲ್ಲಿ ಟಾಮಿಫ್ಲೂ ಮಾತ್ರೆಗಳನ್ನು ಮುಕ್ತಮಾರುಕಟ್ಟೆಯಲ್ಲಿ ಮಾರಲು ಅನುಮತಿಸಲಾಗಿದ್ದು, ಅವುಗಳು ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ.

ವೈದ್ಯಾಧಿಕಾರಿಗಳು, ಅರೆವೈದ್ಯ ಸಿಬ್ಬಂದಿ ಮತ್ತು ಸರ್ಕಾರಿ ಆಸ್ಪತ್ರೆ ಸಹಾಯಕ ಸಿಬ್ಬಂದಿ, ಹೆಚ್1ಎನ್1 ಸೋಂಕು ರೋಗ ನಿರ್ವಹಣಾ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವರ್ಗದ ಸಿಬ್ಬಂದಿಗೆ ಹೆಚ್1ಎನ್1 ವಿರುದ್ಧದ 109110 ಡೋಸ್ ಲಸಿಕೆಗಳನ್ನು ನೀಡಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ಆಶಾ ಮತ್ತು ಅಂಗನಾಡಿ ಸೆಕ್ಟೋರಲ್ ಸಭೆಯಲ್ಲಿ ಹೆಚ್1ಎನ್1 ಸೋಂಕಿನ ಬಗ್ಗೆ ಸಮಾಲೋಚಿಸಿ ಅಗತ್ಯ ಕ್ರಮಕೈಗೊಳ್ಳಲು ಸುತ್ತೋಲೆಗಳನ್ನು ಕಳುಹಿಸಲಾಗಿದೆ.

ಈ ಕಾಯಿಲೆಯ ಪ್ರಮಾಣವು ಇಳಿಮುಖವಾಗಿದ್ದರೂ ಕೂಡ ತೀವ್ರನಿಗಾವಣೆ ವಹಿಸಲಾಗುತ್ತಿದೆ.

ತುರ್ತು ಅಂಬುಲೆನ್ಸ್ ಸೇವೆ

771 (1482) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

(ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಮಾನ್ಯ ಅಂಬುಲೆನ್ಸ್‌ಗಳಲ್ಲಿ ತಾಯಿ ಮತ್ತು ಮಗುವಿಗೆ ಮಾತ್ರ ಉಚಿತ ಸೇವೆಯನ್ನು ನೀಡುತ್ತಿದ್ದು, ಇತರೆ ರೋಗಿಗಳಿಗೆ ಪ್ರತೀ ಕಿ.ಮೀ.ಗೆ